(ಇಂದು ದಿನಾಂಕಃ 17–10–2025 ರಂದು ಸಾಕ್ಷಿಯನ್ನು ತೆರೆದ ನ್ಯಾಯಾಲಯಕ್ಕೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.)

ಮಧ್ಯಂತರ ಅರ್ಜಿ ಸಂಖ್ಯೆ **8** ಮತ್ತು **9** ರ ಆದೇಶದ ಮೇರೆಗೆ ಪಾಟೀಸವಾಲು ಃ ಶ್ರೀ ಎನ್ ಎಂ ಪಿ ವಕೀಲರಿಂದ ಃ **-**

1) ನನಗೆ ಕನ್ನಡ ಓದು ಬರಹ ಬರುತ್ತದೆ. ನನ್ನ ತಾಯಿ ರಾಮದುರ್ಗ ತಾಲೂಕಿನ ಗೊನ್ನಾಗಾರ ಗ್ರಾಮದ ಶಿವನಗೌಡ ರಾಚಪ್ಪನವರನ್ನು ವಿವಾಹವಾಗಿರುತ್ತಾರೆ ಎಂದರೆ ಸರಿ. ನನ್ನ ತಾಯಿಗೆ ಗುರುಸಿದ್ಧಪ್ಪ ಎನ್ನುವ ಸಹೋದರ ಇರುತ್ತಾನೆ ಎಂದರೆ ತಮ್ಮ ಎಂದು ನುಡಿಯುತ್ತಾರೆ. ನನ್ನ ತಾಯಿಯ ತಾಯಿ ಯಲ್ಲಮ್ಮ ಎಂದರೆ ಸರಿ. ಸದರಿ ಯಲ್ಲಮ್ಮ ರವರ ತಂದೆ ಹೆಸರು ಬಸವನ್ನೆಪ್ಪ ನಾಯ್ಕರ ಅಂದರೆ ಸರಿಯಲ್ಲ. ಸದರಿ ವಿಷಯವನ್ನು ನಾನು ಸುಳ್ಳು ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ. ಬಸವನ್ನೆಪ್ಪ ನಾಯ್ಕರ ರವರು ರೋಣದ ನಿವಾಸಿ ಅಂದರೆ ಸರಿಯಲ್ಲ.

2) ನಾನು ಎಂದಿಗೂ ಹಾಳಕುಸಗಲ್ ಗ್ರಾಮದ ಗದಿಗೆಪ್ಪಗೌಡ ಕುಟುಂಬಕ್ಕೆ ಸೇರಿದವಳಲ್ಲ ಅಂದರೆ ಸರಿಯಲ್ಲ. ನನ್ನ ತಾಯಿ ಬಸವ್ವ ರವರ ಮನೆತನದ ಹೆಸರು ಶಾಂತಿಗೇರಿ ಅಂದರೆ ಸರಿಯಲ್ಲ. ನನ್ನ ತಾಯಿ ಪಾಟೀಲ ಮನೆತನಕ್ಕೆ ಸೇರಿದವರು ಎಂದು ದಾಖಲೆ ಹಾಜರು ಪಡಿಸಿರುತ್ತೇನೆ. ಸಾಕ್ಷಿಗೆ ತಾವು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಲು ನೀಡಿ ಅದರಲ್ಲಿ ನನ್ನ ತಾಯಿ ಪಾಟೀಲ ಮನೆತನಕ್ಕೆ ಸೇರಿದವರು ಎಂದು ತೋರಿಸಲು ದಾಖಲೆಗಳು ಇರುವುದಿಲ್ಲ ಎಂದರೆ ಸಾಕ್ಷಿಯು ಅದು ಪಾಟೀಲ ಅಂತಾ ಇರುವುದಿಲ್ಲ ಗದಿಗೆಪ್ಪಗೌಡ ಅಂತಾ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ವಿಷಯದ ಬಗ್ಗೆ ನಾನು ದಾಖಲೆಗಳನ್ನು ಹಾಜರು ಪಡಿಸಿರುತ್ತೇನೆ. ಸಾಕ್ಷಿಗೆ ತಾವು ಸಲ್ಲಿಸಿದ ದಾಖಲೆಗಳನ್ನು ಪರಿಶೀಲಿಸಲು ನೀಡಿ, ಸಾಕ್ಷಿಯು ಪರಿಶೀಲಿಸಿ ನನಗೆ ತಿಳಿಯುತ್ತಿಲ್ಲ ಎಂದು ನುಡಿಯುತ್ತಾರೆ.

3) ಗದಿಗೆಪ್ಪಗೌಡ ಹಾಗೂ ಗುರುಶಿದ್ದವ್ವ ರವರ ದತ್ತಕನ ಮಗನು ಶರಣಪ್ಪಗೌಡ ಇವರು ಸಿವಿಲ್ ಡೆತ್ ಆಗಿರುತ್ತಾರೆ ಎಂದು ಘೋಷಣೆ ಕೋರಿ ಅಸಲು ದಾವಾ ಸಂಖ್ಯೆ 144/2016 ರಲ್ಲಿ ಆದೇಶವನ್ನು ಪಡೆದುಕೊಂಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸದರಿ

ದಾವೆಯನ್ನು ನನ್ನ ಪರ ಇದ್ದ ವಕೀಲರು ನಡೆಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಗದಿಗೆಪ್ಪಗೌಡ ಹಾಗೂ ಯಲ್ಲಮ್ಮ ರವರಿಗೆ ಯಾವುದೇ ರಕ್ತ ಸಂಬಂದ ಇರುವುದಿಲ್ಲ ಅಂದರೆ ಸರಿಯಲ್ಲ. ಪ್ರಸ್ತುತ ದಾವೆಯಲ್ಲಿ ಸುಶೀಲಾ ಎನ್ನುವವರಿಗೆ ವಿಶ್ವನಾಥ ಹಾಗೂ ಮಂಜುನಾಥ ಎನ್ನುವ ಮಕ್ಕಳು ಇದ್ದು ಅವರು ದಾವೆಯ ಅವಶ್ಯಕ ಪಕ್ಷಗಾರರು ಅಂದರೆ ಸರಿಯಲ್ಲ.

4) ಯಲ್ಲಮ್ಮ ತಂದೆ ಬಸವನ್ನೆಪ್ಪ ನಾಯ್ಕರ ರವರು ಮೂಲತಃ ರೋಣದ ನಿವಾಸಿ ಅಂದರೆ ಸರಿಯಲ್ಲ. ಸದರಿಯವರಿಗೆ ರೋಣದ ಗುರುಸಿದ್ದಪ್ಪ ಶಾಂತಗೇರಿ ರವರು ವಿವಾಹವಾಗಿರುತ್ತಾರೆ ಎಂದರೆ ಸರಿಯಲ್ಲ. ಗದಿಗೆಪ್ಪಗೌಡ ಹಾಗೂ ಗುರುಶಿದ್ದವ್ವ ರವರು ಎಂದಿಗೂ ಹಾಳಕುಸಗಲ್ ಗ್ರಾಮಕ್ಕೆ ನನ್ನ ತಾಯಿಯನ್ನು ಕರೆತಂದು ಜೋಪಾಣ ಮಾಡಿಲ್ಲ ಅಂದರೆ ಸರಿಯಲ್ಲ.

ಈ ಹಂತದಲ್ಲಿ ಮುಂದುವರೆದ ಪಾಟೀಸವಾಲಿಗೆ ಸಮಯವಕಾಶ ಕೋರಿದ್ದು**,** ಅಂತಿಮ ಸಮಯವಕಾಶ ನೀಡಲಾಯಿತು**.**

*(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು.)*

**ಓ. ಹೇ. ಕೇ. ಸರಿ. ಇದೆ.**

(ನವೀನ ಎಫ್. ಡಿಸೋಜಾ)

**ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ.**

**ನವಲಗುಂದ.**